# ಸ್ವಾಮಿ ಶಾಂತಾನಂದ (೧೮೮೪-೧೯೭೪)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**



ಸ್ವಾಮಿ ಶಾಂತಾನಂದರನ್ನು ನಾನು ೧೯೮೪-೮೫ರಲ್ಲಿ ‘ಉದ್ಬೋಧನ’ದಲ್ಲಿ ಕಂಡಿದ್ದೆನೆಂದು ತೋರುತ್ತದೆ. ಅವರೊಬ್ಬ ಉಚ್ಚಕೋಟಿ ಸಾಧುಗಳೆಂದೂ, ಶ್ರೀಮಾತೆಯವರ ಶಿಷ್ಯರೆಂದೂ ಕೇಳಿದ್ದೆ. ಪ್ರಣಾಮ ಮಾಡಲೆಂದು ಅವರ ಬಳಿ ಸಾರಿದಾಗ, ‘ದೂರದಿಂದಲೇ ಪ್ರಣಾಮ ಮಾಡು,’ ಎಂದು ಹೇಳಿದ್ದರು. ನಾನು ಸ್ತಂಭೀಭೂತನಾದೆ. ಮಹಾರಾಜರಿಗೆ ಟಿ.ಬಿ. ಆಗಿತ್ತೆಂದು ನಂತರ ತಿಳಿದು ಬಂತು. ಈಗ ಅವರು ಗುಣಮುಖರಾಗಿ ‘ಉದ್ಬೋಧನ’ದಲ್ಲಿದ್ದರು. ತಮ್ಮ ಹತ್ತಿರ ಹೋಗಿ ಪ್ರಣಾಮ ಮಾಡುವುದನ್ನು ನನ್ನ ಒಳಿತಿಗಾಗಿಯೇ ಅವರು ನಿಷೇಧಿಸಿದ್ದರು. ಅವರು ಅನೇಕ ದಿನಗಳಿಂದ ‘ತೇಗಿ’ನಿಂದ ಬಳಲುತ್ತಿದ್ದರು.

ಅವರಿಗೆ ಟಿ.ಬಿ. ಆಗಿದೆಯೆಂದು ತಿಳಿದು ಬಂದಿದ್ದು ಅವರು ಕಾಶಿಯಲ್ಲಿದ್ದಾಗ (೧೯೪೭-೪೮ರಲ್ಲಿ). ಆಗ ಸ್ವಾಮಿ ಶ್ರೀಧರಾನಂದಜಿಯವರು ಅವರ ಸೇವಕರಾಗಿದ್ದರು. ಆದರೆ ಅವರಿಗೆ ಟಿ.ಬಿ. ರೋಗ ಆಗಿದೆಯೆಂದು ಯಾರೂ ಹೇಳಿರಲಿಲ್ಲ. ನಂತರ ಸ್ವಾಮಿ ವಿರಜಾನಂದಜಿಯವರು ಅವರನ್ನು ಸಿಮ್ಲಾದ ಟಿ.ಬಿ. ಆಸ್ಪತ್ರೆಗೆ ಕಳುಹಿಸುವ ಏರ್ಪಾಡು ಮಾಡಿದಾಗಲೆ ಅವರಿಗೆ ಈ ವಿಷಯ ತಿಳಿದಿದ್ದು. ೨೩ ಮೇ ೨೦೦೫ರಂದು ಈ ಅಪೂರ್ವ ಕತೆಯನ್ನು ನನಗೆ ಹೇಳಿದ್ದು, ಅವರ ಸಮ್ಮತಿಯನ್ನು ಪಡೆದ ನಾನು ನನ್ನ ಡೈರಿಯಲ್ಲಿ ಬರೆದೆ :

ಶ್ರೀಮಾತೆಯವರ ಆದೇಶವನ್ನು ಪಡೆಯುವುದು ಹೇಗೆಂಬುದನ್ನು ಶಾಂತಾನಂದರು ಈ ರೀತಿ ಹೇಳುತ್ತಾರೆ: ‘‘ ‘ಜೀವನದಲ್ಲಿ ಯಾವುದೇ ಸಂಕಟ ಬಂದರೂ ನನ್ನನ್ನು ಸ್ಮರಿಸಿಕೊ. ಕೆಲವು ದಿನ ಯಾರಡೊನೆಯೂ ಬೆರೆಯದೆ ಬಹಳವಾಗಿ ಜಪ-ಧ್ಯಾನ ಹಾಗೂ ಪ್ರಾರ್ಥನೆ ಮಾಡುತ್ತ, ‘ಅಮ್ಮಾ, ಏನು ಮಾಡಲಿ?’ ಎಂದು ಮೊರೆಯಿಡು. ಈ ಸಮಯದಲ್ಲಿ ಅಲ್ಪಾಹಾರವನ್ನು ಗ್ರಹಿಸು, ನಿನ್ನ ದೇಹ-ಮನಸ್ಸುಗಳನ್ನು ಪವಿತ್ರವಾಗಿರಿಸಿಕೊ, ಅಗತ್ಯಕ್ಕಿಂತ ಹೆಚ್ಚಿಗೆ ಯಾರೊಂದಿಗೂ ಮಾತನಾಡಬೇಡ. ಒಮ್ಮನಸ್ಸಿನಿಂದ ಈ ರೀತಿಯಾಗಿ ಪ್ರಾರ್ಥನೆ ಹಾಗೂ ಸಾಧನೆಯನ್ನು ಮಾಡುತ್ತ ಹೋಗು. ಧೈರ್ಯಗೆಡಬೇಡ. ನನ್ನ ಉತ್ತರ ಪಡೆಯುವುದು ತಡವಾದರೂ ಧೈರ್ಯದಿಂದಿರು. ಯಾವ ಉತ್ತರವೂ ಸಿಗದಿದ್ದರೆ, ನನ್ನ ಉತ್ತರವನ್ನು ಪಡೆಯುವ ಮಟ್ಟಕ್ಕೆ ನಿನ್ನ ಮನಸ್ಸು ಏರಿಲ್ಲವೆಂದು ತಿಳಿ. ಭಕ್ತಿ-ವಿಶ್ವಾಸಗಳಿಂದ ವ್ಯಾಕುಲನಾಗಿ ಕರೆಯುತ್ತ ಹೋದರೆ ನನ್ನಿಂದ ಉತ್ತರವು ಖಂಡಿತವಾಗಿಯೂ ಸಿಗುವುದು’ ಎಂದು ಶ್ರೀಮಾತೆಯವರು ನನಗೆ ಹೇಳಿದ್ದರು.’’ ಹೀಗೆ ಮಾಡಿದ ಎರಡು-ಮೂರು ದಿನಗಳಲ್ಲೆ ಶಾಂತಾನಂದಜಿಯವರು ಶ್ರೀಮಾತೆಯವರ ದರ್ಶನ ಹಾಗು ಆದೇಶಗಳನ್ನು ಪಡೆದಿದ್ದರು. ಅವರು ಶ್ರೀಮಾತೆಯವರಿಗೆ, ‘‘ಅಮ್ಮಾ, ಟಿ.ಬಿ. ಯಿಂದ ನಾನು ಸಾಯುವುದಾದರೂ ನನಗೆ ದುಃಖವಿಲ್ಲ. ಆದರೆ ನನ್ನ ಸೇವೆಯನ್ನು ಮಾಡುತ್ತಿರುವ ಈ ಹುಡುಗನಿಗೆ (ಸಲಿಲ್, ನಂತರ ಸ್ವಾಮಿ ಶ್ರೀಧರಾನಂದ) ಟಿ.ಬಿ. ಬಾರದಿರಲಿ. ಇದೇ ನನ್ನ ಪ್ರಾರ್ಥನೆ,’’ ಎಂದಾಗ ಶ್ರೀಮಾತೆಯವರು ಸಮ್ಮತಿಸಿದರು. ನಂತರ ಈ ವಿಷಯವನ್ನು ಶಾಂತಾನಂದಜಿಯವರು ಶ್ರೀಧರಾನಂದಜಿಯವರಿಗೆ ಹೇಳಿದ್ದರು.

ಸ್ವಾಮಿ ಶಾಂತಾನಂದರು ಬೇಲೂರು ಮಠದ ಸ್ವಾಮೀಜಿಯವರ ದೇವಸ್ಥಾನದ ಎದುರಿಗಿರುವ ‘ಪ್ರೇಮಾನಂದ ಭವನ’ದಲ್ಲಿದ್ದಾಗ ಸುಶೀಲ ಮಹಾರಾಜರು ಅವರ ಸೇವೆ ಮಾಡುತ್ತಿದ್ದರು. ಅವರಿಗೆ ನಾನು ಅನೇಕ ಬಾರಿ ಪ್ರಣಾಮ ಮಾಡಿದ್ದೇನೆ. ಹೆಚ್ಚಾಗಿ ಅವರು ಸುಮ್ಮನಿರುತ್ತಿದ್ದರು. ಹರಿ ಮಹಾರಾಜರು ಅವರಿಗೆ ‘‘ಖಗೇನ್(ಶಾಂತಾನಂದಜಿ) ಈ ಜೀವನದಲ್ಲೆ ಶಾಂತಿ ಪಡೆದಿದ್ದಾನೆ’’ ಎಂದ ಬಗ್ಗೆ ನಾನು ಸಾಧುಗಳಿಂದ ಕೇಳಿರುವೆ.

ನಾನೊಮ್ಮೆ ಸ್ವಾಮಿ ಮಾಧವಾನಂದಜಿಯವರನ್ನು ಕೇಳಿದ್ದೆ, ‘‘ಮಹಾರಾಜ್, ಜಪ-ಧ್ಯಾನ ಮಾಡುವಾಗ ಮನಸ್ಸು ಏಕೆ ಚಂಚಲವಾಗುತ್ತದೆ?’’ ಎಂದು. ಆಗ ಅವರು ಹೇಳಿದರು, ‘‘ಆ


ಖಗೇನ್ ಮಹಾರಾಜರನ್ನು ನೋಡು, ಕುಳಿತ ಕೂಡಲೇ ಅವರು ಹೃದಯದ ಅಂತರಾಳದಲ್ಲಿ ಮುಳುಗಿ ಹೋಗುತ್ತಾರೆ. ಅವರಿಗೆ ಮನಸ್ಸಿನೊಂದಿಗೆ ಯುದ್ಧ ಮಾಡಬೇಕಾದ ಅಗತ್ಯವಿಲ್ಲ. ನೀನು ನಿನ್ನ ಗುರುಗಳು ಉಪದೇಶಿಸಿದಂತೆ ಜಪ-ಧ್ಯಾನಗಳನ್ನು ಮಾಡಿದರೆ, ಕ್ರಮೇಣವಾಗಿ ನಿನ್ನ ಮನಸ್ಸು ಶಾಂತವಾಗುತ್ತದೆ.''

ನಾನು ಅಮೆರಿಕಕ್ಕೆ ಬರುವ ಮೊದಲು ಕೆಲವು ದಿನಗಳ ಕಾಲ ಬೇಲೂರು ಮಠದಲ್ಲಿದ್ದೆ. ಒಂದು ದಿನ ಶಾಂತಾನಂದಜಿಯವರ ಆಶೀರ್ವಾದವನ್ನು ಪಡೆಯಲು ಹೋಗಿದ್ದೆ. ಸೇವಕರಾಗಿದ್ದ ಸುಶೀಲ್ ಮಹಾರಾಜರು ಶಾಂತಾನಂದಜಿಯವರಿಗೆ ಹೇಳಿದರು, ''ಮಹಾರಾಜ್, ಚೇತನಾನಂದ ಅಮೆರಿಕಾಗೆ ಹೋಗುತ್ತಿದ್ದಾನೆ. ಅವನನ್ನು ಆಶೀರ್ವದಿಸಿ.'' ಇದನ್ನು ಕೇಳಿ ಮಹಾರಾಜ್ ಮೌನವಾಗಿದ್ದರು. ನಾನು ಅವರ ಕುರ್ಚಿಯೆದುರು ನೆಲದ ಮೇಲೆ ಕುಳಿತಿದ್ದೆ. ಅವರ ತುಟಿಗಳು ಅದುರುತ್ತಿದ್ದವು. ಕೆಲವು ಕ್ಷಣಗಳು ಕಣ್ಣುಗಳನ್ನು ಮುಚ್ಚಿ, ಮತ್ತೆ ತೆರೆಯುತ್ತಿದ್ದಾರೆ. ಸುಮಾರು ಹದಿನೈದು ನಿಮಿಷಗಳ ಬಳಿಕ ಅವರು ನನಗೆ ''ಜಪ ಮಾಡು'' ಎಂದರು. ಮತ್ತೆ ನನ್ನ ಮುಖವನ್ನು ನೋಡುತ್ತ ಮೌನವನ್ನು ತಳೆದರು. ಹದಿನೈದು ನಿಮಿಷಗಳು ಕುಳಿತಿದ್ದೆ. ಕೊನೆಗೆ ಸುಶೀಲ್ ಮಹಾರಾಜರು ನನಗೆ ಹೇಳಿದರು, ''ಈಗ ಹೋಗು, ಮಹಾರಾಜರು ಇನ್ನೇನೂ ಹೇಳುವುದಿಲ್ಲ.''

ಈಗಲೂ ಆ ಹಿರಿಯ ಸಾಧುಗಳು 'ಜಪ ಮಾಡು' ಎಂಬ ಮಾತುಗಳು ನನ್ನ ಕಿವಿಯಲ್ಲಿ ಮೊಳಗುತ್ತಿವೆ. ಈ ಸಾಧುಗಳೆಲ್ಲ ಮೌನವ್ಯಾಖ್ಯೆಯನ್ನು ಮಾಡುತ್ತಾರೆ. ಮೌನವೆ ಅವರು ನೀಡುವ ಶಿಕ್ಷಣ. 'ಉಪಶಾಂತೋऽಯಮ್ ಆತ್ಮಾ.' ಮಹಾರಾಜರೊಂದಿಗೆ ನಾನು ಹೆಚ್ಚು ಮಾತನಾಡಲಿಲ್ಲವೆಂಬ ದುಃಖ ನನಗಿಲ್ಲ. ನಿಃಶಬ್ದವಾಗಿ ಅವರೊಡನೆ ಕುಳಿತಿದ್ದರೂ ಮನಸ್ಸು ಶಾಂತವಾಗುತ್ತಿತ್ತು.

## ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರಿಗೆ ಶ್ರದ್ಧಾಂಜಲಿ

ಪರಮಪೂಜ್ಯ ಸ್ವಾಮಿ ಹರ್ಷಾನಂದಜೀ ಮಹಾರಾಜ್ (೧೯೩೧-೨೦೨೧), ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳಲ್ಲಿ ಒಬ್ಬರು. ಅವರು ಈ ಮಹಾಸಂಘದ ಆರನೇ ಅಧ್ಯಕ್ಷರಾದ ಹಾಗೂ ಶ್ರೀಮಾತೆಯವರ ಶಿಷ್ಯರಾದ ಸ್ವಾಮಿ ವಿರಜಾನಂದಜಿ ಮಹಾರಾಜ್ ಅವರಿಂದ ಮಂತ್ರದೀಕ್ಷೆಯನ್ನು ಪಡೆದರು. ಮೆಕಾನಿಕಲ್ ಇಂಜಿನಿಯರ್ ಪದವಿಯನ್ನು ಚಿನ್ನದ ಪದಕದೊಡನೆ ಪಡೆದ ಪೂಜ್ಯ



ಸ್ವಾಮೀಜಿಯವರು ೧೯೫೪ನೇ ಇಸವಿಯಲ್ಲಿ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠದ ಬೆಂಗಳೂರು ಶಾಖೆಯಲ್ಲಿ ಅಧ್ಯಾತ್ಮ ಜೀವನವನ್ನು ಪ್ರಾರಂಭಿಸಿದರು. ೧೯೬೨ನೇ ಇಸವಿಯಲ್ಲಿ ಅವರು ಅಂದಿನ ರಾಮಕೃಷ್ಣ ಮಹಾಸಂಘದ ಎಂಟನೇ ಅಧ್ಯಕ್ಷರಾಗಿದ್ದ ಸ್ವಾಮಿ ವಿಶುದ್ಧಾನಂದಜಿ ಮಹಾರಾಜ್ ಅವರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದರು.

ಸ್ವಾಮೀಜಿಯವರು ಸಂಘದ ಬೆಂಗಳೂರು, ಮಂಗಳೂರು, ಮೈಸೂರು ಶಾಖೆಗಳಲ್ಲಿ ಹಾಗೂ ಮಹಾಸಂಘದ ಪ್ರಧಾನ ಕೇಂದ್ರವಾದ ಕೊಲ್ಕತ್ತಾದ ಬೇಲೂರು ಮಠದಲ್ಲಿ ಹಾಗೂ ಅಲಹಾಬಾದ್ ಶಾಖೆಯಲ್ಲಿ ಸೇವೆ ಸಲ್ಲಿಸಿದರು. ನಂತರ ೧೯೮೯ರಲ್ಲಿ ಬೆಂಗಳೂರು ಶಾಖೆಗೆ ಬಂದ ಸ್ವಾಮೀಜಿಯವರು ಇಲ್ಲಿನ ಸಂಪೂರ್ಣ ಜವಾಬ್ದಾರಿಯನ್ನು ಅತ್ಯಂತ ೩೧ ವರ್ಷಗಳ ಕಾಲ ಅತ್ಯಂತ ಯಶಸ್ವಿಯಾಗಿ ವಹಿಸಿಕೊಂಡು ಹೋದುದಲ್ಲದೆ, ಈ ಮಠದ ಕೀರ್ತಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳಗುವಂತೆ ಮಾಡಿದರು.

ಸ್ವಾಮೀಜಿಯವರು ಸಂಸ್ಕೃತ, ಕನ್ನಡ, ತೆಲುಗು, ಹಿಂದಿ, ಬಂಗಾಳಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪರಿಣಿತರಾಗಿದ್ದರು. ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದ ಸ್ವಾಮೀಜಿಯರು, ಅತ್ಯುತ್ತಮ ಸಂಗೀತಗಾರರೂ, ವಾಗ್ಮಿಗಳೂ ಆಗಿದ್ದರು. ಇವರು ಆಳವಾದ ಚಿಂತಕರೂ ಹಾಗೂ ಸನಾತನ ಧರ್ಮದ ವಿಷಯದಲ್ಲಿ ಪ್ರಭುತ್ವವನ್ನೂ ಪಡೆದಿದ್ದರು. ಇವರು ಸುಮಾರು ೩೦ ವರ್ಷಗಳ ನಿರಂತರ ತಪಸ್ಸಿನ ಫಲವಾಗಿ Encyclopedia of Hinduism ಎಂಬ ಮೇರುಕೃತಿಯನ್ನು ರಚಿಸಿ, ಸನಾತನ ಧರ್ಮದ ಅನುಯಾಯಿಗಳಿಗೆ, ವಿದ್ಯಾರ್ಥಿಗಳಿಗೆ, ಜಿಜ್ಞಾಸುಗಳಿಗೆ, ಮಹದುಪಕಾರವನ್ನು ಮಾಡಿದ್ದಾರೆ. ಇವರ ಅನೇಕ ಕೃತಿಗಳು ವಿದೇಶೀ ಭಾಷೆಗಳಿಗೆ ಅನುವಾದವಾಗಿವೆ. ಪೂಜ್ಯ ಸ್ವಾಮೀಜಿಯವರು **'ವಿವೇಕಪ್ರಭ'** ಪತ್ರಿಕೆಯ ಸಲಹಾ ಮಂಡಳಿಯ ಸದಸ್ಯರಾಗಿದ್ದರಲ್ಲದೆ, ಅನೇಕ ಲೇಖನಗಳನ್ನು ಕಾಲಕಾಲಕ್ಕೆ ನೀಡುತ್ತಿದ್ದರು. ಪತ್ರಿಕೆಯ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಅನೇಕ ಸಲಹೆಗಳನ್ನು ನೀಡುತ್ತ ಅವರು ಈ ಪತ್ರಿಕೆಗೆ ಅಪೂರ್ವ ಸೇವೆ ಸಲ್ಲಿಸಿದ್ದಾರೆ.

ಅನೇಕ ಭಕ್ತರನ್ನು ಆಧ್ಯಾತ್ಮಿಕ ಜೀವನದಲ್ಲಿ ಮುನ್ನಡೆಯಲು ಸದಾ ಪ್ರೋತ್ಸಾಹವನ್ನು ನೀಡುತ್ತಿದ್ದ ಸ್ವಾಮೀಜಿಯವರು ಉತ್ಸಾಹದ ಚಿಲುಮೆಯಾಗಿದ್ದರು. ಆಬಾಲವೃದ್ಧರೊಡನೆ ಆನಂದದಿಂದ ಇರುತ್ತಿದ್ದ ಸ್ವಾಮೀಜಿಯವರು ಅನೇಕ ಯುವಕರಿಗೆ ತಮ್ಮ ಜೀವನದ ಹಾದಿಯಲ್ಲಿ ಮಾರ್ಗದರ್ಶನವನ್ನು ಮಾಡುತ್ತ ಮುನ್ನಡೆಸುತ್ತಿದ್ದರು.

ಸ್ವಾಮೀಜಿಯವರು ೨೦೨೧ರ ಜನವರಿ ೧೨ ರಂದು ಮಧ್ಯಾಹ್ನ ಸುಮಾರು ೧.೦೫ಕ್ಕೆ ತಮ್ಮ ಇಹಲೋಕವನ್ನು ತ್ಯಜಿಸಿ, ಭಗವಾನ್ ಶ್ರೀರಾಮಕೃಷ್ಣರ ಚರಣಾಶ್ರಯವನ್ನು ಹೊಂದಿದರು.